ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ, ಬೆಳಗಾವಿ

ಸಂಖ್ಯೆ. ಬೆನಪ್ರಾ/ನಿಹಂ/ಬೇಡಿಕೆ ಸಮೀಕ್ಷೆ/2010-11 ಬೆಳಗಾವಿ, ದಿನಾಂಕ: .07.2010

ಸಾರ್ವಜನಿಕ ಪ್ರಕಟಣೆ

ನಿವೇಶನ ಬೇಡಿಕೆಯ ಸಮೀಕ್ಷೆ (DEMAND SURVEY)

ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರವು ನಿವೇಶನ ರಹಿತ ಜನರಿಗೆ ಬೆಳಗಾವಿ ತಾಲ್ಲೂಕ ಕಣಬರ್ಗಿ 2 ನೇ ಹಂತದ ವಸತಿ ಯೋಜನೆ ಸಂಖ್ಯೆ. 61 ಹಾಗೂ ಅನಗೋಳ ಭಾಗ್ಯನಗರ ಯೋಜನೆ ಸಂಖ್ಯೆ. 62 ಗಳಲ್ಲಿ ತಯಾರಿಸುವ ನಿವೇಶನಗಳ ಬೇಡಿಕೆಯ ಬಗ್ಗೆ ಸಮೀಕ್ಷೆಯನ್ನು ನಡೆಸಲು ಯೋಜಿಸಲಾಗಿದೆ. ಇಚ್ಛೆಯುಳ್ಳ ನಿವೇಶನಗಳ ರಹಿತರು ಈ ಕೆಳಗೆ ಕಾಣಿಸಿದ ನಮೂನೆಯಲ್ಲಿ ಮಾಹಿತಿಯನ್ನು ಭರ್ತಿ ಮಾಡಿ, ಈ ಪ್ರಕಟಣೆಯಾದ ದಿನಾಂಕದಿಂದ 15 ದಿನಗಳ ಒಳಗಾಗಿ ಕಚೇರಿ ಸಮಯದಲ್ಲಿ ಖುದ್ದಾಗಿ ಅಥವಾ ಅಂಚೆ ಮೂಲಕ ತಲುಪುವಂತೆ ಬೇಡಿಕೆ ಅರ್ಜಿಯನ್ನು " ಆಯುಕ್ತರು, ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ, ಅಶೋಕ ನಗರ, ಬೆಳಗಾವಿ-590 016 " ಈ ವಿಳಾಸಕ್ಕೆ ಸಲ್ಲಿಸಲು ಕೋರಲಾಗಿದೆ.

ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ, ಬೆಳಗಾವಿ. ನಿವೇಶನ ಬೇಡಿಕೆಯ ಸಮೀಕ್ಷೆಯ ಬಗ್ಗೆ ನಮೂನೆ		
ಯೋಜನೆ ಹೆಸರು: **ಕಣಬರ್ಗಿ ಯೋಜನೆ** **ಅನಗೋಳ ಯೋಜನೆ** (ಬೇಡಿಕೆ ಯೋಜನೆಗೆ √ ರೈಟ್ ಗುರುತು ಮಾಡುವುದು.)		
ಕ್ರ. ಸಂ.	ವಿವರ	
1.	ಅರ್ಜಿದಾರರ ಪೂರ್ಣ ಹೆಸರು.	
2.	ತಂದೆ/ಗಂಡನ ಹೆಸರು.	
3.	ವಯಸ್ಸು ಮತ್ತು ಜನ್ಮ ದಿನಾಂಕ.	
4.	ಪೂರ್ಣ ವಿಳಾಸ.	
5.	ಉದ್ಯೋಗ: ಕೇಂದ್ರ/ ರಾಜ್ಯ ಸರಕಾರಿ ಸೇವೆ/ ವ್ಯವಹಾರ / ಇತರೆ.	
6.	ವಾರ್ಷಿಕ ವರಮಾನ ರೂಪಾಯಿಗಳಲ್ಲಿ	
7.	ವಿವಾಹಿತರೋ ಅಥವಾ ಅವಿವಾಹಿತರೋ, ಅವಲಂಬಿತ ಕುಟುಂಬದ ಸದಸ್ಯರ ಸಂಖ್ಯೆ ವಯಸ್ಸು ಮತ್ತು ಕುಟುಂಬದ ವಿವರ.	
8.	ಯಾವ ವರ್ಗದಲ್ಲಿ ಸೇರುತ್ತೀರಿ. ಅ) ಹಿಂದುಳಿದ ಪಂಗಡಗಳು ಆ) ಅನುಸೂಚಿತ ಪಂಗಡ (ಎಸ್.ಟಿ.) ಇ) ಅನುಸೂಚಿತ ಜಾತಿ (ಎಸ್. ಸಿ.) ಉ) ಮಾಜಿ ಸೈನಿಕರು ಅಥವಾ ಮೃತ ಸೈನಿಕರ ಕುಟುಂಬದ ಸದಸ್ಯರು ಮತ್ತು ಕೇಂದ್ರ ಶಸ್ತ್ರ ಪಡೆ ಸದಸ್ಯರು ಊ) ರಾಜ್ಯ ಸರಕಾರಿ ನೌಕರರೋ?	

	ಏ) ಕೇಂದ್ರ ಸರಕಾರಿ ನೌಕರರೋ? ಐ) ಅಂಗವಿಕಲರೋ? ಒ) ಇತರ ಸಾಮಾನ್ಯರೋ?	
9.	ಹೊಂದಲಿಚ್ಛಿಸುವ ನಿವೇಶನದ ಅಳತೆಯ ವಿವರ: (√ ರೈಟ್ ಗುರುತು ಮಾಡುವುದು.)	20' x 30' 30' x 40' 40' x 60' 50' x 80'
10.	ನೀವು 10 ವರ್ಷಗಳಿಗೆ ಕಡಿಮೆ ಇಲ್ಲದ ಅವಧಿಯವರೆಗೆ ಕರ್ನಾಟಕ ರಾಜ್ಯದ ರಹವಾಸಿ ಇದ್ದೀರಾ? ಹೌದು/ಇಲ್ಲಾ	
11.	ನೀವಾಗಲೀ ಅಥವಾ ನಿಮ್ಮ ಕುಟುಂಬದ ಸದಸ್ಯರಾಗಲಿ ಕರ್ನಾಟಕ ರಾಜ್ಯದ ಯಾವುದೇ ನಗರಾಭಿವೃದ್ಧಿ ಪ್ರಾಧಿಕಾರ, ಪಾಲಿಕೆ ಪುರಸಭೆ, ನಗರಸಭೆ, ಕರ್ನಾಟಕ ಗೃಹ ಮಂಡಳಿ ಅಥವಾ ಸಂಸ್ಥೆಗಳಿಂದ ರಾಜ್ಯದ ಯಾವುದೇ ಭಾಗದಲ್ಲಿ ನಿವೇಶನ ಅಥವಾ ಮನೆ ಮಾಲೀಕತ್ವ ಹೊಂದಿರುವಿರಿ ಹೇಗೆ?	
12	ಬೆಳಗಾವಿ ನಗರದಲ್ಲಿ ನೀವು ಅಥವಾ ನಿಮ್ಮ ಕುಟುಂಬದ ಸದಸ್ಯರ ಹೆಸರಿನಲ್ಲಿ ಮನೆ ಅಥವಾ ನಿವೇಶನ ಹೊಂದಿರುವಿರಾ? ಹೊಂದಿದ್ದಲ್ಲಿ ವಿವರ:	
13.	ಹಾಲಿ ವಾಸಿಸತಕ್ಕ ಮನೆ ಸ್ವಂತದ್ದೋ? ಬಾಡಿಗೆ ಮನೆಯೋ?	
14.	ಇತರೆ ವಿವರಗಳು.	

ದಿನಾಂಕ: ಸಹಿ:

<u>ಷರತ್ತುಗಳು:</u>

1) ಈ ಹಿಂದೆ ಪ್ರಾಧಿಕಾರಕ್ಕೆ ನಿವೇಶನ ಮಂಜೂರಾತಿ ಕೋರಿ ಅರ್ಜಿ ಸಲ್ಲಿಸಿದ್ದವರು ಸಹಿತ ತಮ್ಮ ಬೇಡಿಕೆ ಅರ್ಜಿ ಸಲ್ಲಿಸುವುದು.
2) ಈ ಅರ್ಜಿ ಜೊತೆಗೆ ಯಾವುದೇ ನೋಂದಣಿ/ಠೇವಣಿ ಶುಲ್ಕ ಅಥವಾ ಅರ್ಜಿ ಶುಲ್ಕವನ್ನು ಪಾವತಿಸುವುದು ಅವಶ್ಯಕತೆ ಇರುವುದಿಲ್ಲ.
3) ಸದರಿ ಅರ್ಜಿಯನ್ನು ಬೆರಳಚ್ಚು / ಗಣಕೀಕೃತ ಮುದ್ರಣ ಅಥವಾ ಕೈಬರಹ ನಮೂನೆಯಲ್ಲಿ ತಯಾರಿಸಿ ಸಲ್ಲಿಸುವುದು.
4) ಸದರಿ ಅರ್ಜಿ ನಮೂನೆಯು ಕೇವಲ ನಿವೇಶನ ಬೇಡಿಕೆಯ ಸಮೀಕ್ಷೆ ಇದ್ದು, ನಿವೇಶನ ಹಂಚಿಕೆ ನೋಂದಣಿಗೆ ಅರ್ಜಿ ನಮೂನೆಯಲ್ಲ.

ಈ ಕುರಿತು ಹೆಚ್ಚಿನ ಮಾಹಿತಿ ಬೇಕಾದಲ್ಲಿ ಕಚೇರಿ ಸಮಯದಲ್ಲಿ ನಗರಾಭಿವೃದ್ಧಿ ಪ್ರಾಧಿಕಾರದ ನಗರ ಯೋಜಕ ಸದಸ್ಯರು/ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರನ್ನು ಸಂಪರ್ಕಿಸಿ ಪಡೆಯಬಹುದು.

ಆಯುಕ್ತರು,
ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ, ಬೆಳಗಾವಿ.

ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ, ಬೆಳಗಾವಿ

ಸಂಖ್ಯೆ. ಬೆನಪ್ರಾ/ಯೋ/ಪ್ರಕಟಣೆ/2010-11. ಬೆಳಗಾವಿ,ದಿನಾಂಕ: 28.07.2010.

ಇವರಿಗೆ,

ಜಿಲ್ಲಾ ವಾರ್ತಾ ಮತ್ತು ಪ್ರಚಾರಾಧಿಕಾರಿಗಳು,
ಜಿಲ್ಲಾ ವಾರ್ತಾ ಮತ್ತು ಪ್ರಚಾರ ಇಲಾಖೆ,
ಬೆಳಗಾವಿ.

ಮಾನ್ಯರೆ,

ವಿಷಯ: ಸುದ್ದಿ ರೂಪದಲ್ಲಿ ಸಾರ್ವಜನಿಕರಿಗೆ ಪತ್ರಿಕಾ ಪ್ರಕಟಣೆ ಮಾಡುವ ಕುರಿತು.

*****

ಪ್ರಾಧಿಕಾರದಿಂದ ಹೊರಡಿಸಲಾದ ನಿವೇಶನ ಬೇಡಿಕೆಯ ಸಮೀಕ್ಷೆಯ ಪ್ರಕಟಣೆಯನ್ನು ದಿನಾಂಕ: 28.07.2010 ರಂದು ಪ್ರಕಟಿಸಲಾಗಿರುತ್ತದೆ. ಸದರೀ ಪ್ರಕಟಣೆಯನ್ನು ನೋಡಿ ಸಾರ್ವಜನಿಕರಿಗೆ ಯಾರೂ ಮೋಸ ಮಾಡದಂತೆ ಎಚ್ಚರಿಕೆ ವಹಿಸುವ ಕುರಿತು ಈ ಕೆಳಗೆ ವಿವರಿಸಿದ ಮಾಹಿತಿಯನ್ನು ಸುದ್ದಿ ರೂಪದಲ್ಲಿ ಎಲ್ಲ ಪತ್ರಿಕೆಗಳಲ್ಲಿ ಪ್ರಕಟಿಸುವಂತೆ ಕ್ರಮ ಕೈಗೊಳ್ಳಬೇಕಾಗಿ ಕೋರಲಾಗಿದೆ.

" ಸಾರ್ವಜನಿಕರ ಗಮನಕ್ಕೆ "

" ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ರೂಪಿಸಲಾಗುತ್ತಿರುವ ಹೊಸ ವಸತಿ ಬಡಾವಣೆ ಯೋಜನೆಗಾಗಿ, ನಿವೇಶನ ಬೇಡಿಕೆದಾರರಿಂದ ಬೇಡಿಕೆ ಸಮೀಕ್ಷೆ (Demand Survey) ಗೆ ಅರ್ಜಿ ಮಾತ್ರ ಸಲ್ಲಿಸಲು ಪ್ರಕಟಿಸಲಾಗಿದೆ. ಅರ್ಜಿಯೊಂದಿಗೆ ಯಾವುದೇ ಹಣ ಪಾವತಿಸಬೇಕಾಗಿಲ್ಲ. ಯಾರಾದರೂ ಹಣ ವಸೂಲು ಮಾಡಲು ಪ್ರಯತಿಸಿದರೆ, ಅಂಥವರಿಂದ ಮುನ್ನೆಚರಿಕೆ ವಹಿಸುವಂತೆ ಸಾರ್ವಜನಿಕರ ಗಮನಕ್ಕೆ ತರಲಾಗಿದೆ. "

ತಮ್ಮ ವಿಶ್ವಾಸಿ,

ಆಯುಕ್ತರು,
ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ, ಬೆಳಗಾವಿ.